ನೋಡಿದರೂ ಬಗಡದಿಂದ ಸಾರಿಸಿದ ನೆಲ, ಅದರ ಮೇಲೆ ಎಳೆ ಎಳೆಯಾಗಿ ಬಿಟ್ಟ ರಂಗೋಲಿ, ತಲೆಬಾಗಿಲಿಗೆ ಮಾವು-ಬೇವಿನ ಸಿಂಗಾರ. ಎಲ್ಲವೂ ಹಸುರುಮಯ! ಹಟ್ಟಿಯಲ್ಲಿದ್ದ ಕುರಿರೊಪ್ಪಗಳೂ ಕೂಡ ಅಚ್ಚುಕಟ್ಟಾಗಿದ್ದವು. ಅವುಗಳ ಹೊಳೆಬಾಗಿಲಲ್ಲಿ ಕೆಲವರು ಮಾವಿನೆಲೆಯ ತೋರಣ ಹಾಗೂ ಬೇವಿನ ಎಸಳುಗಳನ್ನು ಕಟ್ಟಿದ್ದರು. ಅಂದು ಯಾರೂ ಕೂಡ ರೊಪ್ಪಗಳಿಂದ ಕುರಿಗಳನ್ನು ಹೊರಗೆ ಬಿಟ್ಟಿರಲಿಲ್ಲ. ಚಿಕ್ಕ ಮಕ್ಕಳೆಲ್ಲಾ ಹೊಸ ಬಟ್ಟೆ ತೊಟ್ಟು ಬಿಸಿಲಿನ ನಡುವೆಯೇ ಆಡುತ್ತಿದ್ದರು. ನನ್ನ ದೃಷ್ಟಿ ಏಕೋ ಕೆಲವು ಕುರಿರೊಪ್ಪಗಳ ಸಾಲಿನತ್ತ ಹರಿಯಿತು. ಆಯ್ದ ಕೆಲವು ಹಿರಿಯರು ಮಾತ್ರ ರೊಪ್ಪದ ಬಳಿಯೇ ಕುಳಿತಿದ್ದರು. ಏಕೋ ಅವರ ಮುಖದಲ್ಲಿ ಹಬ್ಬದ ಸಂಭ್ರಮ ಅಷ್ಟಾಗಿ ಕಂಡುಬರುತ್ತಿರಲಿಲ್ಲ! ಆಳವಾದ ಕಡಲಿನ ನಡುವೆ ಮುಳುಗುತ್ತಿರುವ ಮುಳುಗಿಹೋದ ತಮ್ಮ ನಾವೆಯನ್ನು ಅಸಹಾಯಕರಾಗಿ ನೋಡುತ್ತಾ ಕುಳಿತವರಂತೆ ಅವರು ಕುಳಿತಿದ್ದರು. ನನ್ನ ಕಣ್ಣಿಗೆ ಕಂಡದ್ದು ಅಷ್ಟೇ, ಆದ್ದರಿಂದ ಮತ್ತೇ ನನ್ನ ಗಮನ ಆ ಕಡೆ ಹೊರಳಲಿಲ್ಲ. ಹಟ್ಟಿಯ ಹಿರಿಯರು, ನಡುವಯಸ್ಸಿನವರು ಮತ್ತು ಕೆಲವು ತರುಣರು ಶುಭ್ರವಾದ ಬಿಳಿಬಟ್ಟೆ, ವಲ್ಲಿ, ಪಂಚೆ ತೊಟ್ಟು ಜುಂಜಪ್ಪನ ಪೌಳಿಯ ಮುಂದೆ ನೆರೆಯುತ್ತಿದ್ದರು.

ಇವುಗಳನ್ನು ತಟಾಯ್ದು ಜುಂಜಪ್ಪನ ಪೌಳಿಗೆ ಬಂದೆವು. ಆಗಲೇ ದಾಸಪ್ಪದಿರು ಬವನಾಸಿ ನೇತ್ಹಾಕಿಕೊಂಡು ಬಂದು ಜುಂಜಪ್ಪನ ಗುಡಿಯ ಮುಂದೆ ನಿಂತು ಜಾಗಟೆ ಹೊಡೆದು ಗೋವಿಂದ, ಗೋವಿಂದಾ ಎಂದು ಕೂಗುತ್ತಾ ಪೌಳಿಯಲ್ಲಿದ್ದ ಜುಂಜಪ್ಪ, ತಿಮ್ಮಪ್ಪ ಮತ್ತು ಕಂತಿ ತಿಮ್ಮಪ್ಪನ ಗುಡಿಗಳಿಗೆ ಹಣ್ಣುಕಾಯಿ ಮಾಡಿಸಿ, ಪೂಜೆ ಸಲ್ಲಿಸಿ, ಪೂಜಾರಪ್ಪನಿಂದ ಬೇವು-ಬೆಲ್ಲದ ಪ್ರಸಾದ ಪಡೆದು ತೆರಳುತ್ತಿದ್ದರು. ಹೀಗೆ ಪೌಳಿಗೆ ಬರುವವರು ಬರುತ್ತಲೇ ಇದ್ದರು, ಹೋಗುವವರು ಹೋಗುತ್ತಲೇ ಇದ್ದರು. ಪ್ರತಿ ಸಲದ ಯುಗಾದಿಯಲ್ಲಿ ಬೇವಿನಹಳ್ಳಿಯಲ್ಲಿ ಇದೊಂದು ಸಂಪ್ರದಾಯ. ಈ ಮೂರು ಗುಡಿಗಳಲ್ಲಿ ಜುಂಜಪ್ಪನ ಗುಡಿ ಇನ್ನೂ ಕಾಮ್ಸಿಹುಲ್ಲು ಹೊದ್ದ ಗುಬ್ಬದ ರೂಪದಲ್ಲಿಯೇ ಉಳಿದಿದೆ. ಎಷ್ಟೇ ಬಾಹ್ಯ ಒತ್ತಡಗಳು ಬಂದರೂ ಸೋಲದೆ, ತಮ್ಮ ಸಾಂಪ್ರದಾಯಿಕ ರೂಪದಲ್ಲಿಯೇ ಜುಂಜಪ್ಪನ ಗುಬ್ಬವನ್ನು ಉಳಿಸಿಕೊಂಡು ಬರುತ್ತಿರುವ ಬೇವಿನಹಳ್ಳಿಯವರ ಬಗ್ಗೆ ಗೌರವ ಇಮ್ಮಡಿಯಾಯಿತು. ಉಳಿದ ತಿಮ್ಮಪ್ಪ ಮತ್ತು ಕಂತಿ ತಿಮ್ಮಪ್ಪನ ಗುಡಿಗಳು ಮಾತ್ರ ತಮ್ಮ ಸಾಂಪ್ರದಾಯಿಕ ರೂಪಕ್ಕೆ ಹೊರತಾಗಿ ಕಲ್ಲುಮಣ್ಣಿನ ಚಾವಡಿಯ ರೂಪದಲ್ಲಿದ್ದವು. ಇವರಲ್ಲಿ ಎಲ್ಲ ಗೊಲ್ಲರೂ ದಾಸಪ್ಪದಿರಾಗುವುದಿಲ್ಲ! ಕೇವಲ ಅರನೇರ ಗೊಲ್ಲರು ಮಾತ್ರ ತಿರುಪತಿಗೆ ನಡೆದುಕೊಳ್ಳುತ್ತಾರೆ. ಹೀಗಾಗಿ ಆ ಬೆಡಗಿನವರಿಗೆ ಮಾತ್ರ ದಾಸಪ್ಪದಿರಾಗುವ ಹಕ್ಕು. ಉಳಿದವರಿಗಿಲ್ಲ! ಈ ಅರನೇರ ದಾಸರೇ ಹಟ್ಟಿಯಲ್ಲಿ ನಡೆಯುವ ಹಾಲು ಹುಯ್ಯೋ ಹಬ್ಬ, ದೀವಳಿಗೆಯಲ್ಲಿ ನಡೆಯುವ ಜುಂಜಪ್ಪನ ಪರಿಸೆಯ ಪೂಜಾ ವಿಧಿ ಹಾಗೂ ಹರಕೆ, ಸೂತಕಗಳನ್ನು ತೀರಿಸುವ ಕಾರ್ಯಗಳನ್ನು ಪಾರಂಪರಿಕವಾಗಿ ನಡೆಸಿಕೊಡುತ್ತಾರೆ.

ಜುಂಜಪ್ಪನ ಗುಡಿಯ ಪೂಜಾರಯ್ಯನವರು ಮತ್ತು ಪೂಜಾರ ಚಿತ್ತಯ್ಯನವರು ನಮ್ಮನ್ನು ನೋಡಿ ಬನ್ನಿ ಸಾ, ಸರಿಯಾದ ವ್ಯಾಳೆಗೇ ಬಂದಂಗಾಯಿತು. ಇನ್ನೇನು ಮೂಡ್ಲು ಮಣೇವಿಗೆ ಹೊರಡೋ ಟೇಮು ಇದು ಎಂದು ನಮ್ಮನ್ನು ತಮ್ಮ ಪಕ್ಕದಲ್ಲೇ ಕುಳ್ಳಿರಿಸಿಕೊಂಡರು. ಬೇವಿನಹಳ್ಳಿಯಲ್ಲಿರುವ ಜುಂಜಪ್ಪನ ಒಕ್ಕಲಾದ ಕಾಡುಗೊಲ್ಲರು ಪ್ರತಿವರ್ಷ ಯುಗಾದಿ ಹಬ್ಬದ ದಿನದಂದು ಸಾಂಪ್ರದಾಯಿಕವಾಗಿ ಮೂಡ್ಲಮಣೇವು ಆಚರಣೆಯನ್ನು ಊರಿನ ಕೆರೆಯಂಗಳದಲ್ಲಿ ಪೂಜಾರಪ್ಪನವರು ಮತ್ತು ದಾಸಪ್ಪದಿರ ನೇತೃತ್ವದಲ್ಲಿ ಸಾಮೂಹಿಕವಾಗಿ ಆಚರಿಸುವುದು ಸಂಪ್ರದಾಯವಾಗಿ ಬೆಳೆದುಬಂದಿದೆ.

ಇದರ ನಡುವೆ ಬೇವಿನಹಳ್ಳಿ ಗೊಲ್ಲರಹಟ್ಟಿಯಲ್ಲಿ ಜುಂಜಪ್ಪನ ನಾಲ್ಕು ಸಂಧುಗಳನ್ನು ಅದ್ಭುತವಾಗಿ ಹಾಡುವ ಕೊರ್ಲೆ ತಿಮ್ಮಣ್ಣ ಮತ್ತು ಗಣೆ ಊದುವ ಈಬತ್ತಿ ತಿಮ್ಮಣ್ಣನ ಬಗ್ಗೆ ನಮಗೆ ಮೊದಲೇ ಮಾಹಿತಿಯಿತ್ತು. ನಾನು ತಿಳಿದಂತೆ ಕೊರ್ಲೆ ತಿಮ್ಮಣ್ಣ ಕೇವಲ ಹಾಡುಗಾರ ಮಾತ್ರವಲ್ಲ! ಅವನೊಬ್ಬ ಅದ್ವಿತೀಯ ಪಾರಂಪರಿಕ ಪಶುವೈದ್ಯ ಕೂಡ. ಆ ಸುತ್ತಿನಲ್ಲಿ ದನ-ಕರ, ಕುರಿ-ಮೇಕೆಗಳಿಗೆ ಏನೇ ಜಡ್ಡು-ಜಾಪತ್ತು ಬಂದರೂ ಅದನ್ನು ಕ್ಷಣಮಾತ್ರದೊಡನೆ ವಾಸಿಮಾಡುವ ಮಾಂತ್ರಿಕ ಕೈಗಳು ಅವನವು. ಬಹುಶಃ ಕಾಡುಗೊಲ್ಲರ ಕುರಿಗಾಹಿಗಳಿಗೆ ಈ